



# ಬಿಸಿಲೂರಿನ ಹಸುರ ಸಿರಿ

**ಗುಲ್ಬರ್ಗಾ ವಿಶ್ವವಿದ್ಯಾಲಯದ ‘ಜ್ಞಾನಗಂಗಾ’ ಹಸುರ ಪಾಠವನ್ನೂ ಹೇಳುವಂತಿದೆ. ತಂಗಾಳಿ ಸೂಸುವ ಗಿಡ ಮರಗಳಿಂದ ಆವೃತವಾಗಿರುವ ವಿದ್ಯಾಲಯದ ವಿಶಾಲ ಆವರಣ ಕಣ್ತಣಿಸುತ್ತದೆ.**

■ ವೆಂಕಟೇಶ ಮುದಗಲ್

‘ಬಿಸಿಲೂರು’ ಎಂಬ ವಿಶೇಷಣದ ಜೊತೆ ಗುರುತಿಸಿಕೊಳ್ಳುವ ಕಲಬುರಗಿ, ಬಿಸಿಲ ಧಗೆ ಮಾತ್ರವಲ್ಲ, ಹಸುರ ತಂಪನ್ನೂ ಮೈವೆತ್ತಿದೆ. ಇದಕ್ಕೆ ಉದಾಹರಣೆ ಎಂಬಂತೆ, ಗುಲ್ಬರ್ಗಾ ವಿಶ್ವವಿದ್ಯಾಲಯ ಹಸುರ ಚಪ್ಪರ ಹೊದ್ದು ನಿಂತಿದೆ.

‘ಜ್ಞಾನಗಂಗಾ’ ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಿರುವ ಗುಲ್ಬರ್ಗಾ ವಿಶ್ವವಿದ್ಯಾಲಯದ ಇಡೀ ಆವರಣ ಗಿಡಮರಗಳಿಂದ ಸಮೃದ್ಧವಾಗಿರುವ ಜ್ಞಾನದೇಗುಲದಂತೆಯೇ ಕಾಣುತ್ತದೆ. ಕಲಬುರಗಿ ನಗರದ ಪೂರ್ವ ಭಾಗದಲ್ಲಿ ವಿಮಾನ ನಿಲ್ದಾಣ ರಸ್ತೆಗೆ ಹೊಂದಿಕೊಂಡು ಸುಮಾರು 800 ಎಕರೆ ಜಮೀನಿನಲ್ಲಿ ವಿಶ್ವವಿದ್ಯಾಲಯದ ಆವರಣ ಅಪಾರ ಸಸ್ಯರಾಶಿಯಿಂದ ಕಂಗೊಳಿಸುತ್ತಿದೆ.

ಆವರಣದಲ್ಲಿ ಸಾಕಷ್ಟು ಕಟ್ಟಡಗಳಿವೆ. ಹೀಗಿದ್ದರೂ ಆ ಕಟ್ಟಡಗಳನ್ನೇ ಮರೆಮಾಚುವಷ್ಟು ಹಸುರು ಹೊದಿಸಿದಂತೆ ಗಿಡಮರಗಳು ಬೆಳೆದು ನಿಂತಿವೆ. ನಗರದ ಉಷ್ಣತೆಗಿಂತ ಸುಮಾರು 4 ಡಿಗ್ರಿಯಷ್ಟು ಕಡಿಮೆ ತಾಪಮಾನ ಇಲ್ಲಿರುತ್ತದೆ. ಕಾಡಿನಂತೆ ದಟ್ಟವಾಗಿ ಬೆಳೆದಿರುವ ಮರಗಳು ಚಿಲಿಪಿಲಿ ಉಸುರುವ ಹಕ್ಕಿಗಳಿಗೂ ಸುಂದರ ಜಾಗ ನೀಡಿವೆ. ಇಲ್ಲಿನ ಕಾರ್ಯಸೌಧದ ಮುಂದಿರುವ ಮೂರು ಎಕರೆ ಸ್ಥಳದಲ್ಲಿ ಬೆಳೆಸಿ ನಿರ್ವಹಿಸಲಾಗುತ್ತಿರುವ ಉದ್ಯಾನವನವಂತೂ ನಯನ ಮನೋಹರ.

ಉದ್ಯಾನದ ನಡುವಿನ ಕಾರಂಜಿ, ಆನೆ, ಜಿರಾಫೆ, ಡೈನೊಸಾರ್‌ಗಳ ಪ್ರತಿಕೃತಿಗಳು, ನಾವು ಕಾಡಿನಲ್ಲೇ ಸುಳಿದಾಡುತ್ತಿರುವೆವೇನೋ ಎಂಬಂಥ ಅನುಭವ ನೀಡುತ್ತದೆ. ಸಂಜೆ ವೇಳೆ ಮತ್ತು ರಜಾ ದಿನಗಳಲ್ಲಿ ಇಲ್ಲಿ ಪುಟಾಣಿಗಳ ದಂಡೇ ಸೇರಿರುತ್ತದೆ.

ಎಳ್ಳಮಾಸೆಯ ದಿನದಂದು ಬುತ್ತಿ ಕಟ್ಟಿಕೊಂಡು ಬರುವ ಜನರು, ಈ ಉದ್ಯಾವನದಲ್ಲಿ ಇಡೀ ದಿನ ಆಟ–ಊಟಗಳಲ್ಲಿ ಪಾಲ್ಗೊಂಡು ಸಂತಸದಿಂದ ಮರಳುವುದೂ ಇದೆ.

ಕಾರ್ಯಸೌಧದ ಮುಂಭಾಗದಿಂದ ಸೇಡಂ ರಸ್ತೆಯವರೆಗೂ ರಸ್ತೆಯ ಮಧ್ಯೆ ಸುಮಾರು 25 ಎಕರೆಯಷ್ಟು ವಿಶಾಲ ಭೂ ಪ್ರದೇಶದಲ್ಲಿ ಮತ್ತೂ ಒಂದು ಉದ್ಯಾನವನದ ಯೋಜನೆ ಕೈಗೊಳ್ಳಲಾಗಿದೆ. ‘ನಮ್ಮ ವಿಶ್ವವಿದ್ಯಾಲಯದಲ್ಲಿ ಪರಿಸರ ಸಂರಕ್ಷಣೆಗೆ ನೀಡಿರುವ ಪ್ರಾಮುಖ್ಯಕ್ಕೆ ಇವು ಸಾಕ್ಷಿಯಂತಿವೆ. ಶಿಕ್ಷಣದೊಂದಿಗೆ ಪರಿಸರ ಶಿಕ್ಷಣದ ನೈಜ ಪ್ರಾತ್ಯಕ್ಷಿಕೆಯಂತೆಯೂ ವಿಶ್ವವಿದ್ಯಾಲಯ ಕಾಣಲಿದೆ’ ಎಂದು ಸಂತಸದಿಂದ ನುಡಿಯುತ್ತಾರೆ ಕುಲಪತಿ ಪ್ರೊ. ದಯಾನಂದ ಅಗಸರ್. ■



